**ಕರ್ನಾಟಕ ಸರ್ಕಾರ**
**ಕೃಷಿ ಇಲಾಖೆ**

ಸಂಖ್ಯೆ: ಸಾಗೊವಿ/ಕೃಪಸಲು/2014–15

ಕೇಂದ್ರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು–1,
ದಿನಾಂಕ: 05.11.2014.

**ಸು ತ್ತೋ ಲೆ**

ವಿಷಯ: ಇಲಾಖಾ ಕಾರ್ಯಕ್ರಮಗಳಡಿ ರೈತ ಸಂಪರ್ಕ ಕೇಂದ್ರಗಳಲ್ಲಿ ಕೃಷಿ ಪರಿಕರಗಳ ವಿತರಣೆಗೆ ಬಿಲ್ ಪುಸ್ತಕಗಳನ್ನು ಒದಗಿಸುವ ಬಗ್ಗೆ.

ಉಲ್ಲೇಖ: 1. ದಿನಾಂಕ:19.07.2014 ರಂದು ಕೃಷಿ ಆಯುಕ್ತರು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕೈಗೊಂಡ ಪರಿಶೀಲನಾ ಸಭೆಯ ನಡವಳಿಗಳು.
2. ಈ ಕಛೇರಿಯ ಸಮ ಸಂಖ್ಯೆಯ ಸುತ್ತೋಲೆಯ ದಿನಾಂಕ: 19.09.2014

***********

ಕೃಷಿ ಪರಿಕರಗಳ ಅನುಮೋದಿತ ಸರಬರಾಜುದಾರರು ಕೃಷಿ ಪರಿಕರಗಳನ್ನು ಸಕಾಲದಲ್ಲಿ ರೈತರಿಗೆ ಪೂರೈಸಲು ಅನುಕೂಲವಾಗುವಂತೆ ಇಲಾಖೆಯ ರೈತ ಸಂಪರ್ಕ ಕೇಂದ್ರಗಳಲ್ಲಿ ಸ್ಥಳಾವಕಾಶ ಮತ್ತು ಇನ್ನಿತರ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗಿದೆ. ರೈತರಿಗೆ ವಿತರಿಸಲಾಗುವ ಕೃಷಿ ಪರಿಕರಗಳಿಗೆ ಸಂಬಂಧಿಸಿದ ಮೊತ್ತದ ಲೆಕ್ಕಚಾರವಿಡಲು ಮತ್ತು ಕೃಷಿ ಪರಿಕರಗಳನ್ನು ಖರೀದಿಸಿದ ಬಾಬ್ತು ರೈತರಿಗೆ ರಸೀದಿ ನೀಡುವುದು ಸೂಕ್ತವಾಗಿರುತ್ತದೆ.

ಈ ಬಗ್ಗೆ ಎಲ್ಲಾ ಅನುಮೋದಿತ ಸರಬರಾಜುದಾರರಿಗೆ ಕೃಷಿ ಪರಿಕರಗಳನ್ನು ಸರಬರಾಜು ಮಾಡುವಾಗ ತ್ರಿಪ್ರತಿಗಳಿರುವ ಸಹಿ ಮಾಡಿದ ಬಿಲ್ಲು ಪುಸ್ತಕಗಳನ್ನು ನೀಡುವಂತೆ ಉಲ್ಲೇಖಿತ ಸುತ್ತೋಲೆಯಲ್ಲಿ ಸ್ಪಷ್ಟವಾಗಿ ಸೂಚನೆಯನ್ನು ನೀಡಲಾಗಿರುತ್ತದೆ. ಹಾಗೂ ಕೃಷಿ ಪರಿಕರಗಳ ಸರಬರಾಜುದಾರರ ಪರಿಶೀಲನಾ ಸಭೆಗಳಲ್ಲಿಯೂ ಸಹ ಒತ್ತಿ ಹೇಳಲಾಗಿರುತ್ತದೆ. ಆದರೂ ಸಹ ಈ ಸೂಚನೆಯನ್ನು ಎಲ್ಲಾ ಅನುಮೋದಿತ ಸರಬರಾಜುದಾರರು ಪಾಲನೆ ಮಾಡುತ್ತಿಲ್ಲವೆಂದು ಇಲಾಖೆಯ ಗಮನಕ್ಕೆ ಬಂದಿರುತ್ತದೆ.

ಆದ್ದರಿಂದ, ಯಾವ ಅನುಮೋದಿತ ಸರಬರಾಜುದಾರರು ಅವರ ಉತ್ಪನ್ನಗಳ ಸರಬರಾಜಿನೊಂದಿಗೆ ತ್ರಿಪ್ರತಿಗಳಿರುವ ಸಹಿ ಮಾಡಿದ ಬಿಲ್ಲು ಪುಸ್ತಕಗಳನ್ನು ನೀಡಿರುವುದಿಲ್ಲವೋ ಅಂತಹ ಸಂಸ್ಥೆಯು ಸರಬರಾಜು ಮಾಡಿರುವ ಪರಿಕರವನ್ನು / ಗಳನ್ನು ರೈತರಿಗೆ ವಿತರಿಸದೇ ಸಂಸ್ಥೆಗೆ ಹಿಂದಿರುಗಿಸುವುದು.

ಈ ಬಗ್ಗೆ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳು ಪರಿಶೀಲನೆ ಕೈಗೊಂಡು ಈ ಮೇಲೆ ತಿಳಿಸಿದಂತೆ ಸೂಕ್ತ ಕ್ರಮವನ್ನು ಜರುಗಿಸಲು ಸೂಚಿಸಿದೆ.

ಕೃಷಿ ನಿರ್ದೇಶಕರು.

ಪ್ರತಿಯನ್ನು ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಮಾಹಿತಿಗಾಗಿ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

**E:\Circulars 2010-11.doc**